(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಏನು ಪರಿಶೀಲನೆ ಮಾಡಬೇಕು. ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿದ್ದುದು, ರಾತ್ರೋರಾತ್ರಿ ಅಧಿಕಾರಿಗಳನ್ನು ವರ್ಗ ಮಾಡಿದ್ದಾರೆ. ಅಲ್ಲಿ ಅನ್ಯಾಯ ನಡೆಯುತ್ತಿದೆ.

ಅಧ್ಯಕ್ಷರು:- ಮಾನ್ಯ ಸಚಿವರಿಗೆ ಹೇಳಲು ಅವಕಾಶ ಕೊಡಿ. ಅವರು ಇನ್ನೂ ಪೂರ್ತಿ ಮಾಡಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ವರ್ಗಾವಣೆಯನ್ನು ರದ್ದು ಮಾಡುತ್ತೇವೆ ಎಂದು ಹೇಳಿ....

ಶ್ರೀ ಕೆ.ಎಸ್. ಈಶ್ವರಪ್ಪ:- ಎಲ್ಲವನ್ನು ಪರಿಶೀಲನೆ ಮಾಡುತ್ತೇನೆ ಎಂದರೆ ಮಂತ್ರಿಗಳು ಏತಕ್ಕೆ ಇರಬೇಕು....

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಇಂತಹ ವಿಷಯಗಳನ್ನು ಪೂರ್ವ ಸೂಚನೆ ಕೊಟ್ಟು ಸಭೆಯ ಮುಂದೆ ತಂದರೆ ಸರ್ಕಾರದವರು ಏನಾದರೂ ತಯಾರು ಮಾಡಿಕೊಂಡು ಉತ್ತರ ಹೇಳಬಹುದು. ಏಕ್‌ದಮ್ ಈ ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿ ಉತ್ತರವನ್ನು ಹೇಳಬೇಕು ಎಂದರೆ ತಪ್ಪಾಗುತ್ತದೆ. ಈ ಸಭೆಯು ಸರಿಯಾಗಿ ನಡೆಯಲು ಮಾನ್ಯ ಸದಸ್ಯರು ಸಹಕರಿಸಬೇಕು.

ಅಧ್ಯಕ್ಷರು:- ಮಾನ್ಯ ಸಂಸದೀಯ ಸಚಿವರು ಏನು ಹೇಳಿದ್ದಾರೆ ಅದಕ್ಕೆ ನನ್ನ ಸಂಪೂರ್ಣ ಸಮ್ಮತಿ ಇದೆ. ತಾವು ದಿಢೀರನೆ ಆ ವಿಷಯವನ್ನು ಪ್ರಸ್ತಾಪಿಸಿ ಉತ್ತರ ಹೇಳಿ ಎಂದರೆ ಅವರು ಏನು ಸರ್ವಜ್ಞರೇ? ತಾವು ಸೂಚನೆ ಕೊಟ್ಟು ಕಳುಹಿಸಿ ಆ ಸೂಚನೆಯನ್ನು ಅನಂತರ ಚರ್ಚೆ ಮಾಡೋಣ ಇಲ್ಲದಿದ್ದರೆ ನಿಮಗೆ ಸಿಗುವುದು ಒಂದೇ ಉತ್ತರ ಪರಿಶೀಲನೆ ಮಾಡುತ್ತೇನೆ ಎಂದು.

ಶ್ರೀ ವಾಟಾಳ್ ನಾಗರಾಜ್:- ಸಂಜೆಯೊಳಗೆ ಉತ್ತರವನ್ನು ಕೊಡಿಸಿಕೊಡಿ ಸ್ವಾಮಿ.

ಶ್ರೀ ಆರ್.ವಿ. ದೇಶಪಾಂಡೆ:- ಈ ವಿಷಯದ ಬಗ್ಗೆ ಉತ್ತರ ಕೊಡುವುದಕ್ಕೆ ಏನೂ ತೊಂದರೆ ಇಲ್ಲ.

ಅಧ್ಯಕ್ಷರು:- ಸಂಜೆಯೊಳಗೆ ಎಂದು ಕಡ್ಡಾಯ ಮಾಡಲು ಹೋಗಬೇಡಿ, ಇತ್ತೀಚಿನ ದಿನಗಳಲ್ಲಿ ಸೂರ್ಯ ಬೇಗ ಮುಳುಗುತ್ತಾನೆ.

ಹಕ್ಕುಚ್ಯುತಿ ಸೂಚನೆಯ ಪ್ರಸ್ತಾಪ

4) ಶ್ರೀ ಸತೀಶ್ ಜಾರ್ಕಿವಳ್ಳಿ ಮತ್ತು ಸಂಗಡಿಗರಿಂದ ಆರೋಪ

ಶ್ರೀ ವಿ.ಎಸ್. ಕೌಜಲಗಿ:- ಮಾನ್ಯ ಅಧ್ಯಕ್ಷರೆ, ನಿಯಮ 190ರ ಮೇರೆಗೆ ಹಕ್ಕುಚ್ಯುತಿ ಬಗ್ಗೆ ಒಂದು ನೋಟೀಸನ್ನು ತಮಗೆ ಕಳುಹಿಸಿದ್ದೇನೆ. ದಿನಾಂಕ 8-1-93ರ ಈ ಸಂಜೆ ಪತ್ರಿಕೆಯಲ್ಲಿ ಜಾಹಿರಾತು ಪ್ರಕಟವಾದಂತೆ ಶ್ರೀಮಾನ್ ಸತೀಶ್ ಜಾರ್ಕಿವಳ್ಳಿ ಮತ್ತು ಅವರ ಸಂಗಡಿಗರು ಕೆಲವು ಆರೋಪಗಳನ್ನು ಮುಖ್ಯಮಂತ್ರಿಗಳ ಮತ್ತು ಸದನಕ್ಕೆ ಈ ಪತ್ರಿಕೆಯ ಜಾಹಿರಾತು ಮುಖಾಂತರ ತರಲು ಪ್ರಯತ್ನಿಸಿದ್ದಾರೆ. ಶ್ರೀ ಸತೀಶ್ ಜಾರ್ಕಿವಳ್ಳಿಯವರು ಈಗಾಗಲೇ ಕೊಲೆ ಆರೋಪದಲ್ಲಿ ಸಿಲುಕಿಕೊಂಡಂತಹ ವ್ಯಕ್ತಿ. ಅಬಕಾರಿ ಗುತ್ತಿಗೆಯಿಂದ ಅಪ್ರಾಮಾಣಿಕವಾಗಿ ಸಾಕಷ್ಟು ಹಣವನ್ನು ಸಂಪಾದನೆ ಮಾಡಿ ತನ್ನ ದುಡ್ಡಿನ ದರ್ಪದಿಂದ ನಮ್ಮ ರಾಜಕೀಯ ತೇಜೋವಧೆ ಮಾಡಬೇಕೆಂದು ದಿನಪತ್ರಿಕೆಯಲ್ಲಿ ಪ್ರಕಟಿಸಿದಂತೆ ಘಟಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಯಾವುದೇ ವಸ್ತುವನ್ನು ಖರೀದಿ ಮಾಡಬೇಕಾದರೆ, ಖರೀದಿಯ ಒಂದು ಸಬ್ ಕಮಿಟಿ ಇರುತ್ತದೆ.

ಅಧ್ಯಕ್ಷರು:– ಏನು ಇದು? ಹಕ್ಕುಚ್ಯುತಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೀರಿ. ನಾನು ಅದನ್ನು ನೋಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೆ, ಬಹುಶಃ ಇವತ್ತೇ ಅಧಿವೇಶನದ ಕೊನೆಯ ದಿವಸವೆಂದು ಕಾಣುತ್ತದೆ.

ಅಧ್ಯಕ್ಷರು:– ಇಲ್ಲ, ಇವತ್ತೇ ಕೊನೆಯ ದಿವಸ ಅಲ್ಲ, ಆದ್ದರಿಂದ ನೀವು ನಾಳೆ ಹೇಳಿ.

5) ವಿಧಾನಸಭೆಯ ಸಭಾ ದಿನಗಳನ್ನು 100 ದಿವಸಗಳವರೆಗೆ ನಡೆಸುವುದು.

ಶ್ರೀ ಎಂ.ವಿ. ವೆಂಕಟಪ್ಪ:– ಆಯಿತು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸಾಮಾನ್ಯವಾಗಿ ಐದು ವರ್ಷಕ್ಕೊಮ್ಮೆ ಯಾವುದೇ ಪಕ್ಷದ ಸದಸ್ಯರು ಚುನಾಯಿತರಾದ ಮೇಲೆ ಅವರ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕಷ್ಟ ಸುಖಗಳ ಬಗ್ಗೆ ಇಲ್ಲಿ ಹೇಳುವುದು ಅವರ ಕರ್ತವ್ಯ ಮತ್ತು ಧರ್ಮ. ಆದರೆ ಈ ಸದನ ನಡೆದಿರುವ ದಿವಸಗಳ ಪಟ್ಟಿಯನ್ನು ನೋಡಿದರೆ ಸುಮಾರು 1956ನೇ ಇಸವಿಯಿಂದ 1992ರವರೆಗೆ, 1963ರಲ್ಲಿ ಮಾತ್ರ 98 ದಿವಸ ವಿಧಾನಸಭೆಯ ಅಧಿವೇಶನ ನಡೆದಿದೆ. ವಿಧಾನಸಭೆಯ ವರ್ಕಿಂಗ್ ಡೇಸ್. 66, 68, 64, 70, 73 ಮತ್ತು 97, 98 ದಿವಸ ನಡೆದಿರುವುದು ತಾವು ವಿಧಾನಸಭೆಯ ಸದಸ್ಯರಾಗಿದ್ದಾಗ 1963ನೇ ಇಸವಿಯಲ್ಲಿ. ಬಹುಶಃ ತಾವು ಆಗ ಜೋರಾಗಿ ಗಲಾಟೆ ಮಾಡಿದ ಹಾಗೆ ಕಾಣುತ್ತದೆ, ಅದಕ್ಕೋಸ್ಕರ 98 ದಿವಸ ನಡೆದಿದೆ.

ಅಧ್ಯಕ್ಷರು:– ನಾವು ಇಷ್ಟು ಗಲಾಟೆ ಮಾಡುತ್ತಿರಲಿಲ್ಲ. ಅದಕ್ಕೋಸ್ಕರ ಜಾಸ್ತಿ ದಿವಸ ಸಭೆ ನಡೆದಿದೆ.

ಶ್ರೀ ಎಂ.ವಿ. ವೆಂಕಟಪ್ಪ:– ನಾನು ಹೇಳುವುದು ಇಷ್ಟೇ ಅಧ್ಯಕ್ಷರೆ, ನಾವು ಚುನಾಯಿತರಾದ ಮೇಲೆ 1990–91, 1991–92ರಲ್ಲಿ ಮೊದಲಿನ ವರ್ಷ 67 ದಿವಸ ಅಧಿವೇಶನ ನಡೆದಿದೆ. ಹೋದವರ್ಷ 45 ದಿವಸ ಅಧಿವೇಶನ ನಡೆದಿದೆ. ಈಗ 34 ದಿವಸ ಅಂದರೆ ಈಗ ನಡೆದಿರುವ ಎರಡು ವಾರ ವರ್ಕಿಂಗ್ ಡೇಸ್ ಸೇರಿಕೊಂಡರೆ 44 ದಿವಸಗಳಾಯಿತು. 98 ದಿವಸಗಳೆಲ್ಲಿ? 44 ದಿವಸ ಎಲ್ಲಿ? ಹೀಗೆ ನಡೆದರೆ ಯಾವ ರೀತಿಯಲ್ಲಿ ಸದಸ್ಯರು ಅವರವರ ಕ್ಷೇತ್ರದ ಅಭಿವೃದ್ಧಿ ಕೆಲಸಕಾರ್ಯಗಳ ಬಗ್ಗೆ ಮತ್ತು ಕಷ್ಟ ಸುಖಗಳ ಬಗ್ಗೆ ಯಾವರೀತಿ ಹೇಳುವುದು? ನಮ್ಮ ಮತದಾರರು ಏನಿದ್ದಾರೆ ಅವರು ಈಗ ಚುರುಕಾಗಿದ್ದಾರೆ. ಯಾವಾಗಲೂ ಪತ್ರಿಕೆಗಳನ್ನು ಓದುತ್ತಾರೆ, ದೂರದರ್ಶನ ವೀಕ್ಷಿಸುತ್ತಾರೆ, ರೇಡಿಯೋ ಕೇಳುತ್ತಾರೆ ಇವುಗಳಲ್ಲಿ ನಾವು ಮಾತನಾಡಿದ ಮತ್ತು ಪ್ರಸ್ತಾಪ ಮಾಡಿದ ವಿಷಯಗಳು ಬಾರದಿದ್ದರೆ, ಏನು ನಿಮ್ಮದೇನೂ ಬರುವುದಿಲ್ಲ. ನೀವು ಏನು ಮಾಡುತ್ತೀರಿ? ನೀವೇನು ನಿದ್ದೆ ಮಾಡುತ್ತೀರಾ? ಶಾಸಕರ ಭವನದಲ್ಲಿ ಇಸ್ಪೀಟು ಆಡುತ್ತೀರಾ? ಶಾಸಕರ ಭವನದಲ್ಲಿ ಕುಳಿತುಕೊಂಡು ಏನು ಮಾಡುತ್ತೀರಿ ಎಂದು, ಹಾಗೆ ಕೇಳುವಷ್ಟು ಧೈರ್ಯ ಅವರಿಗೆ ಬಂದಿದೆ. ಮೊದಲಿನಹಾಗೆ ಕೇಳದಿರುವ ಪ್ರಶ್ನೆ ಈಗಿಲ್ಲ. ಅದಕ್ಕೋಸ್ಕರ ನಾನು ಹೇಳುವುದು ಒಂದು ವೇಳೆಯನ್ನು ನಿಗದಿ ಮಾಡಿ. ಉದಾಹರಣೆಗೆ ಲೋಕಸಭೆ ಅಥವಾ ರಾಜ್ಯಸಭೆಯನ್ನು ತೆಗೆದುಕೊಳ್ಳಿ. ಮೂರು ಅಧಿವೇಶನಗಳು ನಡೆಯುತ್ತವೆ. ಒಂದು ಬಜೆಟ್ ಅಧಿವೇಶನ, ಎರಡು ಮಾನ್‌ಸೂನ್ ಅಧಿವೇಶನ, ಮೂರು ಚಳಿಗಾಲದ ಅಧಿವೇಶನ. ಯಾವುದೇ ಅಧಿವೇಶನವಾಗಲಿ ಅವರು ಶುರು ಮಾಡುತ್ತಾರೆ. ಆದರೆ ನಮ್ಮ ವಿಧಾನಸಭೆ ಹೋದ ಸಾರಿ 34 ದಿವಸ ನಡೆದಿರುವುದು ಬಹಳ ಶೋಚನೀಯ. ಇದರಿಂದ ಸದಸ್ಯರುಗಳ ಹಕ್ಕನ್ನು ಮೊಟಕು ಮಾಡಿದ ಹಾಗೆ ಕಾಣುತ್ತದೆ. ಈಗ ಹೊಸ ವರ್ಷ 1993ನೇ ಇಸವಿ ಪ್ರಾರಂಭವಾಗಿದೆ. ಈ ವರ್ಷದಲ್ಲಾದರೂ ವರ್ಕಿಂಗ್ ಡೇಸ್ ನಮಗೆ ಬೇಕಾಗಿರುವುದು 100–125 ದಿವಸ ಕನಿಷ್ಠ ಪಕ್ಷ ಅಷ್ಟಾದರೂ ಮಾಡಿ. ರೂಲ್ಸ್ ಕಮಿಟಿಗೆ ತಾವೇ ಅಧ್ಯಕ್ಷರಾಗಿದ್ದೀರಿ, ರೂಲ್ಸ್ ಏನು ಮಾಡಿದ್ದೀರಿ? ಅದರಲ್ಲಿ 120 ರಿಂದ 150 ದಿವಸ ವರ್ಕಿಂಗ್ ಡೇಸ್ ಮಾಡಬೇಕೆಂದು